'ಅಲ್ಲ... ಅಲ್ಲ ನಾನು ಹಾಗಲ್ಲ ಅಂದಿದ್ದು... ಮರಗಳ ವಿಷಯದಲ್ಲಿ ನೀವು ಅಷ್ಟೊಂದು ಮನಸ್ಸಿಗೆ ಹಚ್ಚಿಕೊಂಡ್ರೆ ಹೇಗೇ... ಅಂತ.'

'ಇಲ್ಲ... ಇಲ್ಲ, ನಿಂಗೆ ಗೊತ್ತೇ ಆಗುದಿಲ್ಲ ಬಿಡು. ನೀನು ಈ ಮನೆಗೆ ಹೊರಗಿನಿಂದ ಬಂದ ಹೆಣ್ಣು. ನಂಗೆ ಕೈ ಕಾಲು ಬಂದಂದಿನಿಂದ ದಿನವೂ ನಾನು ಆ ಸಸಿಗಳನ್ನು ನೋಡುತ್ತಾ, ಬೆಳೆದವನು... ಅವುಗಳ ಬೆಳವಣಿಗೆಯ ಚಂದವನ್ನು ಕಣ್ತುಂಬಿಸಿಕೊಂಡವನು. ನಿನ್ಗೆ ನನ್ನ ಮನಸ್ಸು ಅರ್ಥವಾಗುವುದಿಲ್ಲ ಬಿಡು. ಅಂವು ಮರಗಳು... ತಾನಾಗೆ ಸತ್ರೆ ಅದು ಒಂದು ಬೇರೆನೇ ನೋವು, ಆದ್ರೆ ಇವತ್ತು ನಂಗೆ ಆಗುತ್ತಿರುವ ನೋವು ಇದೆ ಅಲ್ವಾ...' ತಿಂಮ ಕಣ್ಣೀರಿಳಿಸಿಕೊಂಡೇ ಅತ್ತಿದ್ದ.

ಹೆಂಡತಿ ಎಷ್ಟು ಸಮಧಾನಿಸಿದರೂ ತಿಂಮಪೂಜಾರಿ ನಿನ್ನೆಯೇ, 'ನಂಗೆ ಮೈಯಲ್ಲೇನೋ ಸುಖವಿಲ್ಲ... ಒಮ್ಮೆ ಕುಡಾಲದ ಧರ್ಮಾಸ್ಪತ್ರೆಗೆ ಹೋಗಿ ಬರುತ್ತೇನೆ' ಎಂದು ಧನಿಗಳ ತಾಯಿಗೆ ಹೇಳಿ ಬೋಳೂರಿನ ತನ್ನ ಮಗಳ ಮನೆಗೆ ತೆರಳಿಯೇ ಬಿಟ್ಟಿದ್ದ.

ಅವನು ಹಾಗೆ ಹೋದ... ಮರುದಿನವೆ ಮುಂಜಾನೆ ಸಾಧುಶೆಟ್ಟಿಯ ಬೈಲಿನ ಕಟ್ಟಹುಣಿಯಲ್ಲಿ ಜನವೋ ಜನ. 'ಕೊಡಿಮರ'ಕ್ಕೆ ಮರ ಕಡಿಯುವ ಗಳಿಗೆಯದು. ವಾಸುತಂತ್ರಿಗಳು, ಶ್ರೀಧರಾಚಾರಿ, ಸುತ್ತಲ ನಾಲ್ಕೂರಿನ ಗುತ್ತಿನ ಒಡೆಯರುಗಳು ಹಾಗೂ ಊರವರು ಕೊಂಬು ವಾದ್ಯಗಳ ಸಮೇತ ಕಡಿಯಲಿರುವ ಮರದ ಬಳಿಗೆ ಬಂದವರೇ... ಅಪಾರ ಭಕ್ತಿಯಿಂದ ಒಬ್ಬೊಬ್ಬರಾಗಿ ಆ ಮರದ ಬುಡಕ್ಕೆ ಅಡ್ಡ ಬಿದ್ದರು. ಶಾಸ್ತ್ರಾನುಸಾರ ಕಡಿಯಲಿರುವ 'ವೃಕ್ಷದ ಪಾದ'ವನ್ನು ದೇವರ ಜಲದಿಂದ ತೊಳೆದು, ಮರದ ಬುಡಕ್ಕೆ ಕುಂಕುಮ ಹಚ್ಚಿ, ಸುವಾಸನೆಯ ಹೂಗಳನ್ನರ್ಪಿಸಿದರು; ನಂತರದಲ್ಲಿ ಮರದ ಬುಡಕ್ಕೆ ನೀರೆರೆದು, ಹಾಲನ್ನೆರೆದರು. ತುಪ್ಪದಾರತಿ ಬೆಳಗಿ 'ಮರ ಕಡಿಯುವ' ಸಂಕಲ್ಪ, ಸಂದರ್ಭ ಮತ್ತು ಸಕಾರಣವನ್ನು 'ವೃಕ್ಷದೆದುರು' ನಿವೇದಿಸಿಕೊಂಡರು. 'ನಮ್ಮ ದೈವ ಸನ್ನಿದಾನವನ್ನು ಕಾಯುವ ಮಹಾಸಂಕಲ್ಪಕ್ಕಾಗಿ, ಇಲ್ಲಿಂದ ನಿನ್ನನ್ನು ಸ್ಥಳಾಂತರಿಸುವ ಮೊದಲೇ ನಿನ್ನ ಬದಲಿಗೆ ಈ ನಮ್ಮ ಭೂಮಿಗೆ, ನಿನ್ನ ಸಂತಾನದ ಏಳು ಸಸಿಗಳನ್ನು ನೆಡುತ್ತೇನೆ' ಎಂದು ಹೇಳಿದವರೆ ಸಾಧುಶೆಟ್ಟಿಗೆ ಸಂಬಂಧಿಸಿದ ಭೂಮಿಯಲ್ಲಿ ಏಳು ಗಿಡಗಳನ್ನು ನೆಡಿಸಿ, ಅವುಗಳಿಗೆ ನೀರೆರೆಸಿ ಬಂದು, ಕಡಿಯಲಿರುವ ಮರದೆದುರಿಗೆ ಮತ್ತೊಮ್ಮೆ ನಿಂತು, ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಂಡರು. 'ಇದು ನಿನ್ನ ಸಂಹಾರವಲ್ಲ. ನೀನು ಊರಿನ ದೈವದೈವಸ್ಥಾನವನ್ನು ಕಾಯುವ ತಾಯಿಯಾಗಿ, ನಮ್ಮನ್ನು ಪೊರೆಯುವ ಶಕ್ತಿಯಾಗಿ, ದೈವಸ್ಥಾನದೆದುರು 'ಕೊಡಿಮರ'ವಾಗಿ ನಿಲ್ಲಲೇಬೇಕಾದವಳು. ನಮ್ಮನ್ನು ಕ್ಷಮಿಸಿ, ನಮ್ಮನ್ನು ಹರಸು ತಾಯಿ ಎಂದು ವಾಸುತಂತ್ರಿಗಳೇ ಮರಕ್ಕೆ ಮೊದಲು ಅಡ್ಡ ಬಿದ್ದರು. ನಂತರ ಅಲ್ಲಿದ್ದವರೆಲ್ಲ ಅಡ್ಡ ಬಿದ್ದು... ಮರದ ಬುಡದ ಹಸಿಮಣ್ಣನ್ನು ಹಣೆಗೆ ಹಚ್ಚಿಕೊಂಡರು. ಮರಕ್ಕೆ ಮೊದಲ ಏಟನ್ನು ಕೊಡಬೇಕಾಗಿದ್ದ ಶ್ರೀಧರಾಚಾರಿ ತನ್ನ ಶಾಸ್ತ್ರದಂತೆ ಮರದೆದುರು ಕಣ್ಮುಚ್ಚಿಕೊಂಡು ನಿಂತು, ಅದೇನೋ ಪ್ರಾರ್ಥಿಸುತ್ತ, ವೃಕ್ಷದ ಶಿರ ನೋಡುತ್ತ... ವೃಕ್ಷದೆದುರು ಮತ್ತೊಮ್ಮೆ ಅಡ್ಡಬಿದ್ದುಶಾಸ್ತ್ರೋಕ್ತವಾಗಿ ತನ್ನ ಕೆಲಸವನ್ನು ನಿರ್ವಹಿಸಿದ್ದ. ಆತನ ಮಾತಿನಂತೆ, ಮರವನ್ನು ಕಟ್ಟಹುಣಿಗೆ ಉರುಳಿಸಲಾಯಿತು.

ಈ ಮರ ಉರುಳಿಸುವ ಹೊತ್ತಿನಲ್ಲಿ ತಿಂಮಪೂಜಾರಿಯೇನಾದರೂ ಅಲ್ಲಿ ಇದ್ದಿದ್ದರೆ ಅಂವ ಎದೆಯೊಡೆದುಕೊಂಡು ಸಾಯುತ್ತಿದ್ದನೇನೋ? ಆದರೆ ಆ ಹೊತ್ತಲ್ಲಿ ಆತ ತನ್ನ ಹಿರಿಮಗಳ ಮನೆಯಲ್ಲಿ ಕೂತು ದುಃಖದಿಂದ ಎದೆ ಹನಿಸಿಕೊಳ್ಳುತ್ತಿದ್ದ. ಆತನ ಹೆಂಡತಿ ಕಮಲು ಪೂಜಾರ್ತಿಗೂ ಮರ ಉರುಳಿಸಿದ ಸುದ್ದಿ ಕೇಳಿ ಉಕ್ಕಿಬಂದ ದುಃಖವೇನು ಕಮ್ಮಿಯಲ್ಲ... ಕಮ್ಮಿಯಲ್ಲವೇ ಅಲ್ಲ.

ಆದರೆ ಅವರಿಬ್ಬರ ದುಃಖದುಮ್ಮಾನ ಕೇಳಲು ಅಲ್ಲಿ ಯಾವುದಾದರು ಕಿವಿಗಳೋ... ಹೃದಯವೋ ಇದ್ದರೆ ತಾನೆ? ಅಲ್ಲಿ ಎಲ್ಲರಿಗೂ ಆ ಮರವನ್ನು ಸರಿಯಾಗಿ ಉರುಳಿಸಿ, ಹುಸೇನನ ಲಾರಿಗೇರಿಸುವುದೇ